# ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ

## ಗ್ರಾಮೀಣ ಕೃಷಿ ಹವಾಮಾನ ಸೇವಾ ಯೋಜನೆ

## ದಕ್ಷಿಣ ಕನ್ನಡ ಜಿಲ್ಲೆಯ ಕೃಷಿ ಹವಾಮಾನ ಸಲಹಾ ಸೂಚಕ

(ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು ಹಾಗೂ ಗ್ರಾಮೀಣ ಕೃಷಿ ಹವಾಮಾನ ಸೇವಾ ಯೋಜನೆ, ಬ್ರಹ್ಮಾವರ–576213, ಉಡುಪಿ ಜಿಲ್ಲೆ ಕರ್ನಾಟಕ ಇವರ ಜಂಟಿ ಪ್ರಸಾರ)

**ಹವಾಮಾನ ಮುನ್ಸೂಚನೆಯ ಅವಧಿ 14.10.2025 ರಿಂದ 18.10.2026**

ಸಂ. ಗ್ರಾ.ಕೃ.ಹ.ಸೇ.ಬ/78/2026 ದಿನಾಂಕ: 13.10.2026

### ಕಳೆದ ವಾರದ ಪರಿಸ್ಥಿತಿ (ದಿನಾಂಕ: 09.10.2026 ರಿಂದ 13.10.2026 ರವರೆಗೆ)

| ಹವಾಮಾನದ ಅಂಶಗಳು | ದಿನ–1 (09.10.2026) | ದಿನ–2 (10.10.2026) | ದಿನ–3 (11.10.2026) | ದಿನ–4 (12.10.2026) | ದಿನ–5 (13.10.2026) |
|---|---|---|---|---|---|
| ಮಳೆ (ಮಿ.ಮೀ.) | 0 | 0 | 0 | 0 | 0 |
| ಗರಿಷ್ಠ ಉಷ್ಣಾಂಶ (ಡಿ.ಸೆ.) | 33 | 32.5 | 32 | 34.2 | 34.9 |
| ಕನಿಷ್ಠ ಉಷ್ಣಾಂಶ (ಡಿ.ಸೆ.) | 24.7 | 25.5 | 25 | 25.3 | 25.3 |
| ಸ್ಥಳೀಯ ಮೋಡಗಳ ಹೊದಿಕ (ಒಕ್ಟಾ) | 5 | 7 | 3 | 1 | 0 |
| ಗರಿಷ್ಠ ಆರ್ದ್ರತೆ (ಶೇ.) | 84 | 87 | 89 | 80 | 81 |
| ಕನಿಷ್ಠ ಆರ್ದ್ರತೆ (ಶೇ.) | 80 | 66 | 78 | 70 | 55 |
| ಗಾಳಿಯ ವೇಗ (ಕಿ.ಮೀ./ಗಂಟೆಗೆ) | 6 | 0 | 0 | 6 | 0 |

ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು, ಇವರು ದಕ್ಷಿಣ ಕನ್ನಡ ಜಿಲ್ಲೆಗೆ ಮುಂದಿನ ಐದು ದಿನಗಳು ದಿನಾಂಕ 14.10.2026 ರಿಂದ 18.10.2026 ರ ವರೆಗೆ ಲಭ್ಯವಿರುವ ಹವಾಮಾನ ಮುನ್ಸೂಚನೆ ಈ ಕೆಳಕಂಡಂತೆ ನೀಡಿರುತ್ತಾರೆ

| ಹವಾಮಾನದ ಅಂಶಗಳು | ಕ್ರೋಢೀಕರಿಸಿದ ಹವಾಮಾನ ಮುನ್ಸೂಚನೆ | | | | |
|---|---|---|---|---|---|
| | ದಿನ–1 (14.10.2026) | ದಿನ–2 (15.10.2026) | ದಿನ–3 (16.10.2026) | ದಿನ–4 (17.10.2026) | ದಿನ–5 (18.10.2026) |
| ಮಳೆ ಪ್ರಮಾಣ (ಮಿ.ಮೀ.) | 0 | 0 | 8 | 20 | 16 |
| ಗರಿಷ್ಠ ಉಷ್ಣಾಂಶ (°C) | 34 | 34 | 33 | 32 | 31 |
| ಕನಿಷ್ಠ ಉಷ್ಣಾಂಶ (°C) | 24 | 23 | 23 | 24 | 23 |
| ಮೋಡದ ಹೊದಿಕೆ (ಒಕ್ಟಾ) | 2 | 3 | 3 | 3 | 4 |
| ಗರಿಷ್ಠ ಆರ್ದ್ರತೆ (ಶೇ.) | 75 | 80 | 85 | 88 | 88 |
| ಕನಿಷ್ಠ ಆರ್ದ್ರತೆ (ಶೇ.) | 55 | 58 | 55 | 60 | 65 |
| ಗಾಳಿಯ ವೇಗ (Kmph) | 2 | 2 | 3 | 3 | 2 |
| ಗಾಳಿಯ ದಿಕ್ಕು (°) | 66 | 79 | 84 | 97 | 74 |

**ಭಾರತ ಹವಾಮಾನ ಇಲಾಖೆ, ನವದೆಹಲಿ ಮತ್ತು ರಾಜ್ಯ ಹವಾಮಾನ ಇಲಾಖೆ, ಬೆಂಗಳೂರು ಇವರು ನೀಡಿರುವ ವಿಸ್ತೃತ ಮಳೆ ಮುನ್ಸೂಚನೆಯ ಪ್ರಕಾರ ಕರ್ನಾಟಕದ ಕರಾವಳಿ ತೀರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ ದಿನಾಂಕ 19.10.2026 ರಿಂದ 25.10.2026 ರವರೆಗೆ ವಾಡಿಕೆಗಿಂತ ಕಡಿಮೆ ಮಳೆಯಾಗುವ ಸಂಭವವಿದೆ.**

### ಹವಾಮಾನ ಪರಿಸ್ಥಿತಿ ಮತ್ತು ಮುನ್ಸೂಚನೆ ಸಾರಾಂಶ

ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು ಇವರು, ದಕ್ಷಿಣ ಕನ್ನಡ ಜಿಲ್ಲೆಗೆ ನೀಡಿದ ಮುನ್ಸೂಚನೆಯ ಪ್ರಕಾರ, **ಮುಂದಿನ ಐದು ದಿನಗಳಲ್ಲಿ ಹಲವೆಡೆ ಒಣಹವೆಯಿಂದ ಸಾಧಾರಣ ಮಳೆಯಾಗುವ ಸಂಭವವಿದೆ.** ಮುಂದಿನ ಐದು ದಿನಗಳಲ್ಲಿ ಗರಿಷ್ಠ ತಾಪಮಾನವು **33.0 °C -34.0°C** ಇರುತ್ತದೆ ಮತ್ತು ಕನಿಷ್ಠ ತಾಪಮಾನವು **23.0 °C -24.0°C** ಇರುತ್ತದೆ. ಸರಾಸರಿ ಸಾಪೇಕ್ಷ ಆದ್ರತೆಯು ಬೆಳಗಿನ ಸಮಯದಲ್ಲಿ **75%** ರಿಂದ **88%** ರಷು ಇರುತ್ತದೆ. ಹಾಗೂ ಮಧ್ಯಾಹ್ನದ ಸಮಯದಲ್ಲಿ **55%** ರಿಂದ **65%** ರಷ್ಟು ಇರುತ್ತದೆ. ಸರಾಸರಿ ಗಾಳಿಯ ವೇಗವು **02-03**ಕೀ.ಮೀ. ಪ್ರತಿ ಘ,ವೇಗದಲ್ಲಿ ಬೀಸಲಿದೆ. ಈ ಹವಾಮಾನ ಪರಿಸ್ಥಿತಿಯನ್ನು ಪರಿಗಣಿಸಿದರೆ, ರೈತರು ಈ ಕೆಳಕಂಡ ಕೃಷಿ ಸಲಹೆಗಳನ್ನು ಅನುಸರಿಸುವಂತೆ ಸಲಹೆ ನೀಡಲಾಗಿದೆ.

**Mobile Applications developed by India Meteorological Department for the benefit of Farming Community Farmers are suggested to download the app using below links**

| | Mausam: | Meghdoot: | Damini: |
|---|---|---|---|
| Andriod: | https://play.google.com/store/apps/details?id=com.imd.masuam | https://play.google.com/store/apps/details?id=com.aas.meghdoot | https://play.google.com/store/apps/details?id=com.lightening.live.damini |
| Apple OS: | https://apps.apple.com/us/app/id1522893967 | https://apps.apple.com/in/app/meghdoot/id1474048155 | https://apps.apple.com/app/id1502385645 |

**Decadal Rainfall (mm) Comparison:**

| Year | 30 years Mean | 2014 | 2015 | 2016 | 2017 | 2018 | 2019 | 2020 | 2021 | 2022 | 2023 | 2024 | 2025 |
|---|---|---|---|---|---|---|---|---|---|---|---|---|---|
| Rainfall | 3783.8 | 2816.3 | 2383.4 | 2827.1 | 3000 | 3381.2 | 4118.4 | 4110.8 | 4110.8 | 3879.9 | 3456.2 | 4511.1 | 5425.0 |
| Rainy days | 108 | 112 | 107 | 119 | 121 | 112 | 123 | 126 | 152 | 125 | 110 | 137 | 142 |

<table>
<tr><td colspan="2">Realized Rainfall<br>(24th September to07th October,2026)</td><td colspan="2">Extended Range Forecast System<br>Rainfall forecast maps for the next 2 weeks (IC -07th October, 2026)<br>(09th to 22nd October, 2026)</td></tr>
<tr><td></td><td></td><td></td><td></td></tr>
</table>

| Warnings for Costal Karnataka | |
|---|---|
| Date of Issue: October 13, 2026 | |
| Day 1:October 13, 2026 | No Warning |
| Day 2: October 14, 2026 | No Warning |
| Day 3: October 15, 2026 | Thunderstorm & Lightning, Squall etc |
| Day 4: October 16, 2026 | Heavy Rain Thunderstorm & Lightning, Squall etc |
| Day 5: October 17, 2026 | Heavy Rain Thunderstorm & Lightning, Squall etc |
| Day 6: October 18, 2026 | Heavy Rain |
| Day 7: October 19, 2026 | No warning |

## ಸಾಮಾನ್ಯ ಸಲಹೆ:

| |
|---|
| ರೈತರು ಬೆಳೆಗಳಿಗೆ ಹೊದಿಕೆ ಮಾಡುವುದು ಸೂಕ್ತವಾಗಿದೆ, ಇದರಿಂದ ತೇವಾಂಶ ಸಂರಕ್ಷಣೆಯಾಗುವುದು |
| ರೈತರು ಅಡಿಕೆ ಮತ್ತು ತೆಂಗು ಬೆಳೆಗಳಿಗೆ ಶಿಫಾರಸ್ಸಿನ ಪ್ರಮಾಣದ ರಸಗೊಬ್ಬರ ನೀಡಬಹುದು |
| ರೈತರು ಜಾನುವಾರುಗಳ ಬೆನ್ನಿನ ಮೇಲೆ ನೆನೆಸಿದ ಗೋಣಿಚೀಲ ಹಾಕುವುದು ಉತ್ತಮ |
| ಈಗಾಗಲೇ 15–20 ದಿನದ ಹಿಂದೆಯೇ ತಮ್ಮ ಜಮೀನಿಗೆ ಕೃಷಿ ಸುಣ್ಣ ಹಾಕಿದ ರೈತರು ಶಿಫಾರಸ್ಸಿನ ಪ್ರಮಾಣದ ರಸಗೊಬ್ಬರ ನೀಡಬಹುದು ಮತ್ತು ನೀರಾವರಿ ಸೌಲಭ್ಯವಿದ್ದರೆ ನೀರನ್ನು ಒದಗಿಸುವುದು |

## ದಕ್ಷಿಣ ಕನ್ನಡ ಜಿಲ್ಲೆಗೆ ನೀಡಿದ ಹವಾಮಾನ ಮುನ್ಸೂಚನೆ ಆಧಾರಿಸಿ ನೀಡಿದ ಕೃಷಿ ಸಲಹೆಗಳು

| ಬೆಳೆ/ಉಪಕಸುಬು | ಬೆಳೆಯ ಹಂತ | ಹವಾಮಾನ ಅಪಾಯ | ಬೆಳೆ ಸಲಹೆ |
|---|---|---|---|
| ಭತ್ತ | ಹೂಬಿಡುವ ಹಂತ | ಮಧ್ಯ ಮತ್ತು ಬೆಟ್ಟು ಗದ್ದೆಗಳಲ್ಲಿ ನೀರಿನ ಕೊರತೆ | • ರೈತರು ಮುಖ್ಯ ಗದ್ದೆಯ ಬದುಗಳನ್ನು ಗಟ್ಟಿಗೊಳಿಸುವ ಮೂಲಕ ನೀರನ್ನು ಸಂರಕ್ಷಿಸುವುದು ಮತ್ತು ನೀರಿನ ಸೋರುವಿಕೆಯನ್ನು ಕಡಿಮೆ ಮಾಡುವುದು. ಬೆಳೆಯ ಈ ನಿರ್ಣಾಯಕ ಹಂತಗಳಲ್ಲಿ ನೀರನ್ನು ನೀಡುವುದು ಉತ್ತಮ ಇದರಿಂದ ಬೆಳೆಯ ಇಳುವರಿ ಹೆಚ್ಚಾಗುತ್ತದೆ. |
| | | • ಕೊಳವೆ ಹುಳು ಮತ್ತು ಎಲೆ ಸುರುಳಿ ಹುಳುವಿನ ಭಾಧೆ ಸಾಧ್ಯತೆ | • ಗದ್ದೆಯ ಬದುಗಳನ್ನು ಸ್ವಚ್ಛವಾಗಿಡುವುದು ಸೂಕ್ತ<br>• ಕೊಳವೆ ಹುಳುವಿನ ಭಾಧೆ ಕಂಡುಬಂದಲ್ಲಿ ಕ್ಲೋರಾನ್ಟ್ರನೀಲಿಪ್ರೋಲ್ 0.5 ಮಿ.ಲೀ/ನೀರಿಗೆ ಅಥವಾ ಕ್ಲೋರೋಫೈರಿಫಾಸ್ 2.0 ಮಿ.ಲೀ/ನೀರಿಗೆ ಅಥವಾ ಬೇವಿನ ಎಣ್ಣೆ 3.0 ಮಿ.ಲೀ/ನೀರಿಗೆ ಬೆರಸಿ ಸಿಂಪಡಿಸುವುದು ಉತ್ತಮ<br>• ಎಲೆ ಸುರುಳಿ ಹುಳುವಿನ ಭಾಧೆ ಕಂಡುಬಂದಲ್ಲಿ ಕ್ಲೋರಾನ್ಟ್ರನೀಲಿಪ್ರೋಲ್ 0.5 ಮಿ.ಲೀ/ನೀರಿಗೆ ಅಥವಾ ಕ್ಲೋರೋಫೈರಿಫಾಸ್ 2.0 ಮಿ.ಲೀ/ನೀರಿಗೆ ಅಥವಾ ಬೇವಿನ ಎಣ್ಣೆ 3.0 ಮಿ.ಲೀ/ನೀರಿಗೆ ಬೆರಸಿ ಸಿಂಪಡಿಸುವುದು ಉತ್ತಮ |
| | | ಗಂಧಿ ತಿಗಣೆ | ರೈತರು ಗಂಧಿ ತಿಗಣೆ ನಿರ್ವಹಣೆ ಮಾಡಲು ಪ್ರತಿ ಲೀಟರ್ ನೀರಿಗೆ 1ಗ್ರಾಂ ಥಯೋಮೆತಾಕ್ಸಾಮ್ ಅನ್ನು ಮಿಶ್ರಣ ಮಾಡಿ ಸಿಂಪಡಿಸುವುದು ಉತ್ತಮ |
| ತೋಟಗಾರಿಕೆ ಬೆಳೆಗಳು | | | |
| ಅಡಿಕೆ | ಕಾಯಿ ಆಗುವ ಹಂತ | ನರ್ಸರಿ | ಕಳೆ ನಿರ್ವಹಣೆ ಮತ್ತು ರೋಗಗಳ ಬಗ್ಗೆ ಮುನ್ನೆಚ್ಚರಿಕೆ ವಹಿಸುವುದು ಉತ್ತಮ. ಮಳೆಯ ಆದಾರದ ಮೇಲೆ ನೀರು ನೀಡುವುದು ಮತ್ತು ಅತಿಯಾಗಿ ನೀರು ನೀಡುವುದನ್ನು ತಪ್ಪಿಸಿರಿ |
| | | ಸಿಂಗಾರ ತಿನ್ನುವ ಹುಳು | ಸಿಂಗಾರ ತಿನ್ನುವ ಹುಳುವಿನ ನಿರ್ವಹಣೆಗೆ ರೈತರು ಸಿಂಗಾರದ ಹೊರಗಿನ ಕವಚವನ್ನು ಹೊಡೆದು ಪ್ರತಿ ಲೀಟರ್ ನೀರಿಗೆ 2ಮಿ.ಲೀನಷ್ಟು ಲ್ಯಾಮ್ಡಸೈಯಲೋಥ್ರಿನ್ ಅಥವಾ ಪ್ರತಿ ಲೀಟರ್ ನೀರಿಗೆ 2ಮಿ.ಲೀನಷ್ಟು ಕ್ಲೋರೋಫೈರಿಫಾಸ್ ಅನ್ನು ಮಿಶ್ರಿಸಿ ಸಿಂಪಡಿಸುವುದು ಸೂಕ್ತ |
| | | ಸುಳಿ ತಿಗಣೆ ಮತ್ತು | ರೈತರು ಈ 02 ಹುಳುಗಳ ಭಾಧೆ ಕಂಡುಬಂದರೆ ಇಮಿಡಾಕ್ಲೋಪ್ರಿಡ್ 1.0 ಮಿ.ಲೀ/ನೀರಿಗೆ |

| | | | |
|---|---|---|---|
| | | ಪೆಂಟಟೋಮಿಡ್ ತಿಗಣೆಯ ಭಾಧೆ ಸಾಧ್ಯತೆ | ಅಥವಾ ಥಯೋಮೆಥಾಕ್ಸಾಮ್ ಅನ್ನು 0.5ಗ್ರಾಂ/ನೀರಿಗೆ ಬರಸಿ ಸಿಂಪಡಿಸುವುದು ಸೂಕ್ತವಾಗಿದೆ |
| | | ಬೇರು ಹುಳು ಭಾಧಿಸುವ ಸಾಧ್ಯತೆ | ಬೇರು ಹುಳು ಭಾಧಿಸುವ ಸಾಧ್ಯತೆಯಿರುವುದರಿಂದ ರೈತರು ಕ್ಲೋರೋಫೈರಿಫಾಸ್ 3.0 – 5.0 ಮಿ.ಲೀ/ನೀರಿಗೆ ಬೆರಸಿ ಒಂದು ಗಿಡದ ಬುಡಕ್ಕೆ ಕನಿಷ್ಠ 5ಲೀಟರ್ ನಷ್ಟು ಹಾಕುವುದು |
| | | ಪೋಷಕಾಂಶ ನಿರ್ವಹಣೆ | ಈಗಾಗಲೇ 15–20 ದಿನದ ಹಿಂದೆಯೇ ಕೃಷಿ ಸುಣ್ಣ ಹಾಕಿದ ರೈತರು ಶಿಫಾರಸ್ಸಿನ ಪ್ರಮಾಣದ ರಾಯಾನಿಕ ಗೊಬ್ಬರ ನೀಡಬಹುದು. ಮತ್ತು ನೀರಾವರಿ ಸೌಲಭ್ಯವಿದ್ದರೆ ನೀರನ್ನು ಒದಗಿಸುವುದು (ಯೂರಿಯಾ: 108 ಗ್ರಾಂ, ಸಿಂಗಲ್ ಸೂಪರ್ ಫಾಸ್ಫೇಟ್: 125 ಗ್ರಾಂ ಮತ್ತು ಮ್ಯುರೇಟ್ ಆಫ ಪೊಟ್ಯಾಷ್: 116ಗ್ರಾಂ + 20 ಕಿ.ಜಿ ಕೊಟ್ಟಗೆ ಗೊಬ್ಬರ/ ಎರೆಹುಳು ಗೊಬ್ಬರ/ ಕಾಂಪೋಸ್ಟ್) |
| ತೆಂಗು | ಕಾಯಿ ಪ್ರಬುದ್ಧತೆಯ ಹಂತ | ಕಪ್ಪು ತಲೆ ಹುಳ | ಕಪ್ಪು ತಲೆ ಹುಳದ ನಿರ್ವಹಣೆ ಮಾಡಲು ಬೆಳಕಿನ ಬಲೆಯನ್ನು ಹಾಕುವುದು ಮತ್ತು ಕೈಗೆ ಎಟುಕುವ ಭಾಧಿತ ಗರಿಗಳನ್ನು ಕತ್ತರಿಸಿ ಹೊರಗಡೆ ಸುಟ್ಟು ಹಾಕುವುದು ಉತ್ಮ ಹಾಗೂ ಪ್ರತಿ ಮರಕ್ಕೆ 10–12 ಗೊನೊಜಿಯಸ್ ನೆಪೆಂಟಿಟಿಸ್ ಹುಳುಗಳನ್ನು ಬಿಡುವುದು ಉತ್ತಮ |
| | | ರೈನೋಸೊರೆಸ್ ದುಂಬಿ ಭಾಧಿಸುವ ಸಾಧ್ಯತೆ | ➢ ಹೊಂಡದಿಂದ ಗೊಬ್ಬರವನ್ನು ಎತ್ತಿದಾಗಲೆಲ್ಲಾ ಗೊಬ್ಬರದ ಹೊಂಡಗಳಿಂದ (ಕೀಟಗಳು ಸಂತಾನೋತ್ಪತ್ತಿ ಮಾಡುವ ಸ್ಥಳ) ಜೀರುಂಡೆಯ ವಿವಿಧ ಹಂತಗಳನ್ನು ಸಂಗ್ರಹಿಸಿ ನಾಶಮಾಡಿ<br>➢ ಕೀಟಗಳ ಶಾಶ್ವತೆಯನ್ನು ಪರೀಕ್ಷಿಸಲು ಗೊಬ್ಬರದ ಹೊಂಡಗಳಲ್ಲಿ ಎಂಟೋಮೊಪಾಥೋಜೆನ್ ಅಂದರೆ ಶಿಲೀಂಧ್ರವನ್ನು (ಮೆಟಾರ್ಹ್ಜಿಯಂ ಅನಿಸೊಪ್ಲಿಯಾ) ಸೇರಿಸುವುದು.<br>➢ ಪ್ರತಿ ಕಟಾವಿನಲ್ಲಿ ಮರದ ಸುಳಿಗಳನ್ನು ಪರೀಕ್ಷಿಸಿ ಮತ್ತು ದೊಡ್ಡ ಜೀರುಂಡೆಗಳನ್ನು ಹೊರತೆಗೆದು ಕೊಲ್ಲುವುದು.<br>➢ ಸುಳಿಯಲ್ಲಿರುವ ಎಲೆಗಳಲ್ಲಿ ಒಳಗಿನ ಮೂರು ಎಲೆಗಳ ತಳದಲ್ಲಿ ಪೋರೇಟ್ 10ಉ+ಮರಳು (1:2) ಪ್ರತಿ ಮರಕ್ಕೆ 150 ಗ್ರಾಂ ನಂತೆ ಸೇರಿಸುವುದು.<br>➢ ರಂಧ್ರಗಳಲ್ಲಿರುವ ಸಣ್ಣ ಚೀಲಗಳಲ್ಲಿ ಪೋರೇಟ್ 10ಉ. 5 ಗ್ರಾಂ ನ್ನು ಹಾಕಿ ಎರಡು ಒಳಗಿನ ಎಲೆಯ ಅಕ್ಷಗಳಲ್ಲಿ 6 ತಿಂಗಳ ಮಧ್ಯಂತರದಲ್ಲಿ 2 ಬಾರಿ ಇರಿಸುವುದು<br>➢ ಜೀರುಂಡೆಗಳನ್ನು ಬಲೆಗೆ ಬೀಳಿಸಲು ಮತ್ತು ಕೊಲ್ಲಲು ರೈನೋಲ್ಯೂರ್ ಫೆರೋಮೋನ್ ಬಲೆಯನ್ನು ಅರ್ಧ ಹೇಕ್ಟರ್‌ಗೆ ಅಳವಡಿಸುವುದು. |
| | | ಪೋಷಕಾಂಶ ನಿರ್ವಹಣೆ | ಈಗಾಗಲೇ 15–20 ದಿನದ ಹಿಂದೆಯೇ ಕೃಷಿ ಸುಣ್ಣ ಹಾಕಿದ ರೈತರು ಶಿಫಾರಸ್ಸಿನ ಪ್ರಮಾಣದ ರಾಸಾಯಣಿಕ ಗೊಬ್ಬರ ನೀಡಬಹುದು. ಮತ್ತು ನೀರಾವರಿ ಸೌಲಭ್ಯವಿದ್ದರೆ ನೀರನ್ನು ಒದಗಿಸುವುದು (ಯೂರಿಯಾ: 550 ಗ್ರಾಂ, ಸಿಂಗಲ್ ಸೂಪರ್ ಫಾಸ್ಫೇಟ್: 1000 ಗ್ರಾಂ ಮತ್ತು ಮ್ಯುರೇಟ್ ಆಫ ಪೊಟ್ಯಾಷ್: 1000ಗ್ರಾಂ + 50 ಕಿ.ಜಿ ಕೊಟ್ಟಗೆ ಗೊಬ್ಬರ/ ಎರೆಹುಳು ಗೊಬ್ಬರ/ ಕಾಂಪೋಸ್ಟ್) |
| ಕಾಳು ಮೆಣಸು | ಕಾಳುಕಟ್ಟುವ ಹಂತ | ಸಾಮಾನ್ಯ ಸಲಹೆ | ಕಳೆ ನಿರ್ವಹಣೆ ಮಾಡುವುದು. ಬಳ್ಳಿಗಳ ಕವಲುಗಳನ್ನು ಕಟ್ಟುವುದು ಮತ್ತು ಆದಾಋದ ಮರಗಳ ಕೊಂಬೆಯನ್ನು ಸವರುವುದು. |
| | | ಪೋಷಕಾಂಶ ನಿರ್ವಹಣೆ | ಈಗಾಗಲೇ 15–20 ದಿನದ ಹಿಂದೆಯೇ ಕೃಷಿ ಸುಣ್ಣ ಹಾಕಿದ ರೈತರು ಶಿಫಾರಸ್ಸಿನ ಪ್ರಮಾಣದ ರಾಯಾನಿಕ ಗೊಬ್ಬರ ನೀಡಬಹುದು. ಮತ್ತು ನೀರಾವರಿ ಸೌಲಭ್ಯವಿದ್ದರೆ ನೀರನ್ನು ಒದಗಿಸುವುದು (ಯೂರಿಯಾ: 50 ಗ್ರಾಂ, ಸಿಂಗಲ್ ಸೂಪರ್ ಫಾಸ್ಫೇಟ್: 150 ಗ್ರಾಂ ಮತ್ತು ಮ್ಯುರೇಟ್ ಆಫ ಪೊಟ್ಯಾಷ್: 125ಗ್ರಾಂ + 10 ಕಿ.ಜಿ ಕೊಟ್ಟಗೆ ಗೊಬ್ಬರ/ ಎರೆಹುಳು ಗೊಬ್ಬರ/ ಕಾಂಪೋಸ್ಟ್) |
| | | ಶೀಘ್ರ ಸೊರಗು ರೋಗ | ಮುನ್ನೆಚ್ಚರಿಕೆ ಕ್ರಮವಾಗಿ ತೀವ್ರವಾಗಿ ರೋಗಭಾಧಿತ ಎಲೆಗಳನ್ನು ಕತ್ತರಿಸಿ ನಾಶಪಡಿಸಬೇಕು. ನಂತರ ಬೇವಿನ ಹಿಂಡಿಯಿಂದ ಅಥವಾ ಟ್ರೈಕೋಡರ್ಮಾದಿಂದ ಸಮೃದ್ಧಗೊಳಿಸಿದ ಕೊಟ್ಟಿಗೆ ಗೊಬ್ಬರ (FYM) ವನ್ನು ಗಿಡದ ಬುಡಕ್ಕೆ ಹಾಕಬೇಕು ಅಥವಾ ಪ್ರತಿ ಲೀಟರ್ ನೀರಿಗೆ 3 ಗ್ರಾಂ ಕಾಪರ್ ಆಕ್ಸಿ ಕ್ಲೋರೈಡ್ ಅಥವಾ 1% ಬೋರ್ಡೋ ಮಿಶ್ರಣವನ್ನು ಬುಡಕ್ಕೆ ಹಾಕಬೇಕು |
| ಗೇರು | ಬೆಳವಣಿಗೆಯ ಹಂತ | ಟೀ ಸೊಳ್ಳೆ ಬಾಧಿಸುವ ನಿರೀಕ್ಷೆ | ಟೀ ಸೊಳ್ಳೆ ನಿರ್ವಹಣೆ ಮಾಡಲು ರೈತರು ಮೊನೊಕ್ರೊಟೋಫಾಸ್ 1.7ಮಿ.ಲೀ/ಲೀ ಅಥವಾ ಲ್ಯಾಮ್ಡಸಹ್ಯಾಲೋಥ್ರಿನ್ 0.5ಮಿ.ಲೀ/ಲೀ ಬೆರಸಿ ಸಿಂಪಡಿಸುವುದು. |
| | | ಕಾಂಡ ಕೊರಕ ಭಾಧಿಸುವ ನಿರೀಕ್ಷೆ | ರೈತರು ಕಾಂಡ ಕೊರಕ ನಿರ್ವಹಣೆ ಮಾಡಲು ಮೊದಲು ಕಾಂಡ ಕೊರಕ ಭಾಧಿತ ರಂಧ್ರವನ್ನು ಶುಚಿಗೊಳಿಸಿ ತಂತಿಯ ಸಹಾಯದಿಂದ ಕಾಂಡ ಕೊರಕವನ್ನು ಹೊರತೆಗೆದು ನಾಶಪಡಿಸಬೇಕು. ತದ ನಂತರ ಕ್ಲೋರೋಫೈರಿಫಾಸ್ ಹರಳನ್ನು ಮರಳಿನ ಜೊತೆಗೆ 1:1 ಅನುಪಾತದಲ್ಲಿ ಮಿಶ್ರಿಸಿ ರಂಧ್ರಕ್ಕೆ ಸುರಿಯುವುದು ಅಥವಾ ಬೋರ್ಡೋ ಪೇಸ್ಟ್ ಅನ್ನು ತಯಾರಿಸಿ ಅದಕ್ಕೆ ಪ್ರತಿ ಕೆ.ಜಿ.ಗೆ 5ಮಿ.ಲೀ ಕ್ಲೋರೋಫೈರಿಫಾಸ್ ಅನ್ನು ಮಿಶ್ರಿಸಿ ಭಾಧಿಸಿದ ರಂಧ್ರಕ್ಕೆ ಹಚ್ಚುವುದು |
| | | ಪೋಷಕಾಂಶ ನಿರ್ವಹಣೆ | ಈಗಾಗಲೇ 15–20 ದಿನದ ಹಿಂದೆಯೇ ಕೃಷಿ ಸುಣ್ಣ ಹಾಕಿದ ರೈತರು ಶಿಫಾರಸ್ಸಿನ ಪ್ರಮಾಣದ ರಾಯಾನಿಕ ಗೊಬ್ಬರ ನೀಡಬಹುದು. ಮತ್ತು ನೀರಾವರಿ ಸೌಲಭ್ಯವಿದ್ದರೆ ನೀರನ್ನು ಒದಗಿಸುವುದು ರೈತರು 60:60:60 ಗ್ರಾಂ, 125:125:125 ಗ್ರಾಂ, 250:125:125 ಗ್ರಾಂ, 500:125:125 ಗ್ರಾಂ ಹಾಗೂ 500:250:250 ಗ್ರಾಂ ನಷ್ಟು ಸಾರಜನಕ/ರಂಜಕ/ಪೊಟ್ಯಾಷ್ ಅನ್ನು 1ನೇ ವರ್ಷದ, 2ನೇ ವರ್ಷದ,3ನೇ ವರ್ಷದ,4 ರಿಂದ 8ನೇ ವರ್ಷದ ಮತ್ತು 9ನೇ ವರ್ಷದ ಮೇಲ್ಪಟ್ಟ ಗಿಡಗಳಿಗೆ ಹಾಕುವುದು ಸೂಕ್ತವಾಗಿದೆ. |
| ಮಲ್ಲಿಗೆ | ಹೂಬಿಡುವ ಹಂತ | ಎಲೆ ಚುಕ್ಕೆ ರೋಗ | ಈ ರೋಗವನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲು 1ಮಿ.ಲೀ ಹೆಕ್ಸಾಕೊನಾಜೋಲ್ ಅನ್ನು ಪ್ರತಿ ಲೀಟರ್ ನೀರಿಗೆ ಮಿಶ್ರಣ ಮಾಡಿ ಸಿಂಪಡಿಸುವುದು |
| | | ಸಾಮಾನ್ಯ ಸಲಹೆ | ಮುಂಗಾರು ಆರಂಭವಾಗುತ್ತಿರುವ ಹಿನ್ನಲೆಯಲ್ಲಿ ರೈತರು ತಮ್ಮ ಜಮೀನಿನಲ್ಲಿ ಬಸಿಗಾಲುವೆ ವ್ಯವಸ್ಥೆಯನ್ನು ಕಲ್ಪಿಸುವುದು ಸೂಕ್ತವಾಗಿದೆ. |
| | | ಮೊಗ್ಗು | ಮೊಗ್ಗು ಕೊರಕ ನಿರ್ವಹಿಸಲು ರೈತರು ಕ್ಲೊರ್ಯಾಟ್ರನಿಫೋಲ್ ಅನ್ನು 0.1ಮಿ.ಲೀ/ಪ್ರತಿ ಲೀಟರ್ ನೀರಿಗೆ |

| | | | |
|---|---|---|---|
| | | ಕೊರಕ | ಮಿಶ್ರಿಸಿ ಸಿಂಪಡಿಸುವ್ಯದು ಉತ್ತಮ |
| ಹಸು | ----- | ಸಾಮಾನ್ಯ ಸಲಹೆ | ಸಹಜವಾಗಿ ಬಿಸಿಲು/ತಾಪಮಾನ ಹೆಚ್ಚಾಗಿರುವುದರಿಂದ ಬಿಸಿಲಿನ ಅವಧಿಯಲ್ಲಿ ಜಾನುವಾರುಗಳನ್ನು ಮೇಯಿಸುವುದನ್ನು ತಪ್ಪಿಸುವುದು ಅಥವಾ ಬಿಸಿಲಿನ ಅವಧಿಯಲ್ಲಿ ಮೇಯಿಸುವಾಗ ಹಸುವಿನ ಬೆನ್ನಿನ ಮೇಲೆ ನೆನೆಸಿದ ಗೋಣಿ ಚೀಲವನ್ನು ಹಾಕುವುಸು ಇದರಿಂದ ಬಿಸಿಲಿನಿಂದಾಗುವ ಆಯಾಸ ಕಡಿಮೆಯಾಗಿ ಹಾಲಿನ ಇಳುವರಿ ಹೆಚ್ಚಾಗುತ್ತದೆ.<br>ಜಾನುವಾರುಗಳಿಗೆ ಶುದ್ಧವಾದ ಕುಡಿಯುವ ನೀರನ್ನು ನೀಡುವುದು ಒಳ್ಳೆಯದು<br>ಜಾನುವಾರುಗಳನ್ನು ಕೊಟ್ಟಿಗೆಯಲ್ಲಿ ಕಟ್ಟುವುದು ಮತ್ತು ಸಮತೋಲಿತ ಆಹಾಋವನ್ನು ನೀಡುವುದು |

(ಈ ಮೇಲಿನ ಬೆಳೆ ಸಲಹೆಯು ಹವಾಮಾನ ಇಲಾಖೆ, ಬೆಂಗಳೂರು ಇವರು ನೀಡಿರುವ ಹವಾಮಾನ ಮುನ್ಸೂಚನೆಯ ಆಧಾರವಾಗಿದೆ)

ಶ್ರೀ. ಪ್ರವೀಣ್ ಕೆ.ಎಮ್,
ತಾಂತ್ರಿಕ ಅಧಿಕಾರಿಗಳು,
ಜಿ.ಕೆ.ಎಮ್.ಎಸ್-ವಿಭಾಗ,
ವ.ಕೃ.ತೋ.ಸಂ.ಕೇ-ಬ್ರಹ್ಮಾವರ.

ಡಾ. ಎನ್. ಇ. ನವೀನ್ ,
ನೋಡಲ್ ಅಧಿಕಾರಿಗಳು,
ಜಿ.ಕೆ.ಎಮ್.ಎಸ್-ವಿಭಾಗ,
ವ.ಕೃ.ತೋ.ಸಂ.ಕೇ-ಬ್ರಹ್ಮಾವರ.